**International Journal of Multidisciplinary Research and Development**
**Online ISSN: 2349-4182, Print ISSN: 2349-5979, Impact Factor: RJIF 5.72**
**www.allsubjectjournal.com**
**Volume 3; Issue 4; April 2016; Page No. 349-351**

# ಅಸ್ಪೃಶ್ಯರ ಸಾಮಾಜಿಕ ನ್ಯಾಯಕ್ಕಾಗಿ ಅಂಬೇಡ್ಕರರ ಚಾರಿತ್ರಿಕ ಹೋರಾಟಗಳು

**Mayur Kudari**

Research Scholar, Dep. of History, RCU.P.G. Centre, Toravi Road, Vijayapura, Karanataka, India.

## Abstract

ಪ್ರಪಂಚದ ಸಮಾಜ ಸುಧಾರಕರಲ್ಲಿ ಡಾ. ಬಾಬಾ ಸಹೇಬ ಅಂಬೇಡ್ಕರರು ಅಂಗ್ರ ಪಂಕ್ತಿಯಲ್ಲಿ ನಿಲ್ಲುವ ನಾಯಕ. ಇವರು ತಾವು ಮಾಡಿದಂತಹ ಹಲವಾರು ಸುಧಾರಣೆಗಳಿಂದ ಹೆಸರುವಾಸಿಯಾಗಿದ್ದಾರೆ, ಅದರಲ್ಲಿಯೂ ಭಾರತೀಯ ಇತಿಹಾಸದಲ್ಲಿ ಯಾರು ಮಾಡದೇ ಇರುವ, ಅಸ್ಪೃಶ್ಯರಿಗಾಗಿ ಮಾಡಿದಂತಹ ಹೋರಾಟ ಸ್ಮರಣೀಯವಾದದ್ದು. ಹಿಂದೂ ಸಮಾಜವು ಸಾವಿರಾರು ವರ್ಷಗಳಿಂದ ಮನುವು ಹಾಕಿಕೊಟ್ಟಂತಹ ನಿಯಮಗಳನ್ನು ತೊರೆಯದೇ ಅವುಗಳನ್ನು ಚಾಚು ತಪ್ಪದೇ ಪಾಲಿಸಿಕೊಂಡು ಬರುತ್ತಿತ್ತು. ಅದರಲ್ಲಿಯೂ ಪ್ರಮುಖವಾಗಿ ಹಿಂದೂ ಸಮಾಜದ ಸವರ್ಣಿಯರ ದಬ್ಬಾಳಿಕೆಯಿಂದ, ಶೋಷಣೆಯಿಂದ ಹೀನವಾದ ಕಾರ್ಯಗಳನ್ನು ಮಾಡಿಕೊಂಡು, ಪ್ರಾಣಿ–ಪಕ್ಷಿಗಳಿಗಿಂತ ಕಡೆಯಾದ ಜೀವನ ಮತ್ತು ಸಮಾಜದ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿ ಗುಲಾಮರಂತೆ ಬದುಕುತ್ತೀದ್ದ ಅಸ್ಪೃಶ್ಯ ವರ್ಗವು ಒಂದಾಗಿತ್ತು. ಈ ಅಸ್ಪೃಶ್ಯ ವರ್ಗಕ್ಕೆ ಡಾ. ಬಾಬಾ ಸಾಹೇಬರು ನಾಯಕರಾಗುವುದಕ್ಕಿಂತ ಮುಂಚೆ ಈ ವರ್ಗಕ್ಕೆ ನಾಯಕರು ಇರಲಿಲ್ಲ, ಇವರ ಕುಂದು ಕೊರತೆಗಳನ್ನು, ಬೇಕು–ಬೇಡುಗಳನ್ನು ಮತ್ತು ಇವರಿಗೂ ಸಾಮಾಜಿಕ ನ್ಯಾಯ ಬೇಕು, ಸಾಮಾಜಿಕ ಹಕ್ಕುಗಳು ಬೇಕು ಎಂಬುದನ್ನು ವಿಚಾರ ಮಾಡುವ ವ್ಯಕ್ತಿಗಳು ಇರಲಿಲ್ಲ. ಆದರೆ ಅದೇ ಜಾತಿಯಲ್ಲಿ ಹುಟ್ಟಿದ ಬಾಬಾ ಸಾಹೇಬರು ಅಸ್ಪೃಶ್ಯರಿಗೆ ಆಗುವ ಅನ್ಯಾಯಗಳನ್ನು ಅನುಭವಿಸಿ, ಗಮನಿಸಿ ಇದು ಹಿಂದೂ ಸಮಾಜದಲ್ಲಿರುವ ಅನಿಷ್ಟ ಪದ್ದತಿಯೆಂದು ತಿಳಿದು, ಇದನ್ನು ಸರಿಪಡಿಸಲೇಬೇಕು ಎಂದು ಹಠ ತೊಟ್ಟು ಇವರ ನಾಯಕತ್ವವನ್ನು ವಹಿಸಿಕೊಂಡು ಸಮಾಜದಲ್ಲಿಯ ಯಾವುದೇ ಜನಾಂಗ, ನಾಯಕರಿಗೆ & ಅಧಿಕಾರಕ್ಕೆ ಅಂಜದೇ ದಲಿತರಿಗೂ ಸಾಮಾಜಿಕ ಹಕ್ಕುಗಳಿವೆ, ಅವರಿಗು ಸಾಮಾಜಿಕ ನ್ಯಾಯ ಬೇಕು, ಅವರು ಸಮಾಜದಲ್ಲಿ ಎಲ್ಲ ವರ್ಗದವರೊಂದಿಗೆ ಸಮನಾಗಿ ಬಾಳಬೇಕು ಎಂಬ ಚಿಂತನೆಯಿಂದ ಹಲವಾರು ಸಾಮಾಜಿಕ ಹೋರಾಟಗಳನ್ನು, ಚಳುವಳಿಗಳನ್ನು ಮಾಡಿ ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು.

**Keywords:** ಅಸ್ಪೃಶ್ಯರ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ, ಅಂಬೇಡ್ಕರರ ಸಾಮಾಜಿಕ ಸುಧಾರಣೆಗಳು

## Introduction

ಭಾರತೀಯ ಸಮಾಜದ ಪುಟಗಳನ್ನು ನೋಡಿದಾಗ ಹಲವಾರು ಮಹಾಪುರುಷರು ನಮ್ಮ ಕಣ್ಮುಂದೆ ಬರುತ್ತಾರೆ ಅದರಲ್ಲಿ ಕೇಲವರು ಕೇವಲ ಪೇಪರ, ಪುಸ್ತಕಗಳಲ್ಲಿ ಮಾತ್ರ ಇದ್ದಾರೆ, ಇನ್ನೂ ಕೆಲವರು ಮಾನವ ಜನಾಂಗದ ಮನಸ್ಸಿನಲ್ಲಿ, ಉಸಿರಿನಲ್ಲಿ ಬೆರೆತು ಹೋಗಿದ್ದಾರೆ ಅಂತಹ ಮಹಾಪುರುಷರಲ್ಲಿ ಮಹಾ ಮಾನವತಾವಾದಿ, ಅರ್ಥಶಾಸ್ತ್ರಜ್ಞ, ರಾಜಕೀಯ ತಜ್ಞ, ನ್ಯಾಯವಾದಿ, ಮಾನವ ಹಕ್ಕುಗಳ ಹೋರಾಟಗಾರ, ಸಮಾಜ ಸುಧಾರಕ, ಸಾಮಾಜಿಕ ನ್ಯಾಯಕ್ಕಾಗಿ ಮತ್ತು ಹಕ್ಕುಗಳಿಗಾಗಿ ಹೋರಾಡಿ ತನ್ನ ಜೀವನವನ್ನೇ ಮುಡುಪಾಗಿಟ್ಟ ದಲಿತ ಸೂರ್ಯ, ನವಬುದ್ಧನೆಂದು ಖ್ಯಾತನಾದ ಡಾ.ಬಾಬಾ ಸಾಹೇಬ ಅಂಬೇಡ್ಕರರು ಕೂಡಾ ಒಬ್ಬರು.

ಸಾವಿರಾರೂ ವರ್ಷಗಳಿಂದ ಭಾರತೀಯ ಸಮಾಜದಲ್ಲಿ ಒಂದು ಮಾನವ ಜನಾಂಗವು ತಮಗೂ ಜೀವವಿದೆ, ತಾನು ಸಮಾಜದಲ್ಲಿ ಬದುಕುವ ಮನುಷ್ಯರು ಎಂಬುದನ್ನು ಮರೆತೂ ಪ್ರಾಣಿ ಪಕ್ಷಿಗಳಿಗಿಂತ ಕೀಳಾಗಿ, ಮೇಲ್ವರ್ಗದವರ ತುಳಿತಕ್ಕೆ ಒಳಗಾಗಿ ಹೀನವಾದ ಬದುಕನ್ನು ಸಾಗಿಸುವ ಜನಾಂಗವಿತ್ತು ಅದುವೇ ಅಸ್ಪೃಶ್ಯ ಜನಾಂಗ. ಈ ಅಸ್ಪೃಶ್ಯರ ಜನಾಂಗವು ಎಷ್ಟೊ ವರ್ಷಗಳಿಂದ ಸಮಾಜದಲ್ಲಿ ತಮ್ಮ ಸಾಮಾಜಿಕ ಹಕ್ಕುಗಳನ್ನು ಮರೆತು ಸವರ್ಣಿಯರು ಹೇಳಿದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೀನ ಬದುಕನ್ನು ಸಾಗಿಸುತ್ತಿದ್ದರು. ಈ ಅಸ್ಪೃಶ್ಯರ ಹೀನವಾದ ಬದುಕಿಗೆ ಕೊನೆ ಹಾಡಿ ಅವರು ಸಮಾಜದಲ್ಲಿ ಎಲ್ಲರಂತೆ ಬದುಕ ಬೇಕು ಎಂದು ಅವರಿಗೂ ಸಾಮಾಜಿಕ ಹಕ್ಕು, ಸಾಮಾಜಿಕ ನ್ಯಾಯವನ್ನು ಕೊಡಿಸಬೇಕೆಂದು ಚಿಂತಿಸಿದವರಲ್ಲಿ ಡಾ.ಬಾಬಾ ಸಾಹೇಬರು ಮಾತ್ರ. ಬಾಬಾ ಸಾಹೇಬರು ತಾವು ಬದುಕಿರುವವರೆಗೂ ದಲಿತರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳನ್ನು ಹಾಗೂ ನ್ಯಾಯವನ್ನು ದೊರಕಿಸಿಕೊಡುವುದಕ್ಕಾಗಿ ಹಗಲಿರುಳು ಶ್ರಮಿಸಿದರು., ಅಷ್ಟೆ ಅಲ್ಲದೆ ಅಸ್ಪೃಶ್ಯರಿಗೆ ಬದುಕುವ ಕಲೆಯನ್ನು ಮತ್ತು ಇಡಿ ಮಾನವ ಜನಾಂಗಕ್ಕೆ ಮಾನವಿಯತೆಯನ್ನು ಹೇಳಿಕೊಟ್ಟು ಜಗತ್ತಿನ ಇತಿಹಾಸದಲ್ಲಿ ಅಮರನಾದ ಭಾರತದ ಮಹಾನಚೇತನ.

### ಉದ್ದೇಶಗಳು

1. ಅಂಬೇಡ್ಕರರ ಸಮಕಾಲಿನ ಸಾಮಾಜಿಕ ಸ್ಥಿತಿಗತಿಯನ್ನು ತಿಳಿಯುವುದು.
2. ಅಂಬೇಡ್ಕರರಿಗೆ ಮತ್ತು ಅಸ್ಪೃಶ್ಯರಿಗೆ ಸವರ್ಣಿಯರಿಂದ ಆದಂತಹ ಅನ್ಯಾಯವನ್ನು ತಿಳಿದುಕೊಳ್ಳುವುದು.
3. ಅಂಬೇಡ್ಕರರು ಕೈಗೊಂಡಂತಹ ಸಾಮಾಜಿಕ ಚಳುವಳಿಗಳನ್ನು ತಿಳಿಯುವುದು.
4. ಅಂಬೇಡ್ಕರರು ಸಾಮಾಜಿಕ ನ್ಯಾಯವನ್ನು ಪಡೆಯಲು ಮಾಡಿದಂತಹ ಹೋರಾಟದ ಪರಿಯನ್ನು ತಿಳಿದುಕೊಳ್ಳುವುದು.

### ವಿಧಾನ

ಈ ಲೇಖನವನ್ನು ಬರೆಯಲು ದ್ವಿತಿಯ ಮೂಲಾಧಾರಗಳಾದ ಗ್ರಂಥಗಳು, ಲೇಖನಗಳು ಮತ್ತು ಅಂತರಜಾಲದ ಮಾಹಿತಿಯ ಸಹಾಯವನ್ನು ಪಡೆದುಕೊಳ್ಳಲಾಗಿದೆ.

ಅಂಬೇಡ್ಕರರು ಸಾಮಾಜಿಕ ನ್ಯಾಯವನ್ನು ಒದಗಿಸಲು ಹಲವಾರು ಮಹತ್ವದ ಹೋರಾಟಗಳನ್ನು ಮಾಡಿದರು ಅದರಲ್ಲಿ ಪ್ರಮುಖವಾಗಿ ಈ ಕೆಳಗಿನಂತಿವೆ.

### ಅಂಬೇಡ್ಕರರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ

ಅಂಬೇಡ್ಕರರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯವು ಶೋಷಣೆಗೆ ಒಳಗಾಗುತ್ತಿರುವ ಎಲ್ಲ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಸಿಗಲೆಬೇಕು ಎಂಬುದು ಇವರ ವಾದವಾಗಿತ್ತು. ಇವರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯವೆಂದರೆ ನೈಜ ಸ್ವಪ್ರೇಮವಾಗಿದೆ, ಈ ನೈಜ ಸ್ವಪ್ರೇಮ ಮತ್ತು ಸಾಮಾಜಿಕ ನ್ಯಾಯ ಎರಡು ಒಂದೇಯಾಗಿವೆ ಎಂಬುದು ಇವರ ಅಭಿಪ್ರಾಯ. ಇವರ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ತತ್ವಜ್ಞಾನವು ಮೂರು ಮೂಲಗಳಿಂದ ಕೂಡಿದೆ ಅವುಗಳೆಂದರೆ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತೆ. ಈ ಮೂರು ಸಮಾಜದ ಜನರಿಗೆ ದೊರೆತರೆ ಸಾಮಾಜಿಕ ನ್ಯಾಯವು ತಾನಾಗಿಯೇ ಸಮಾಜದ ಪ್ರತಿಯೊಬ್ಬ ಜನರಿಗೆ ಸಿಗುತ್ತದೆ ಎಂಬುದು ಅಂಬೇಡ್ಕರರ ಅಭಿಪ್ರಾಯವಾಗಿತ್ತು.

### ಬಹಿಷ್ಕೃತ ಹಿತಕಾರಿಣಿ ಸಭಾದ ಸ್ಥಾಪನೆ

ಅಂಬೇಡ್ಕರರು ಕೇವಲ ಅಸ್ಪೃಶ್ಯರ ಹಿತಕ್ಕಾಗಿ ಅಲ್ಲಾ ಸಮಾಜದಲ್ಲಿ ವಾಸಮಾಡುವ ಪ್ರತಿಯೊಬ್ಬರಿಗೂ ಸಾಮಾಜಿಕ ನ್ಯಾಯ ದೊರಕಬೇಕೆಂದು ಉದ್ದೇಶವನಿಟ್ಟುಕೊಂಡಿದ್ದರು. ಅದರಲ್ಲಿ ಪ್ರಮುಖವಾಗಿ ಹಿಂದುಳಿದ ವರ್ಗದವರು, ಮೇಲ್ವರ್ಗದವರಿಂದ ಅನುಭವಿಸುತ್ತಿರುವ ಯಾತನೆಯನ್ನು ಕೊನೆಗಾಣಿಸಲು ಅವರಿಗೆ ನ್ಯಾಯವನ್ನು ಒದಗಿಸಿಕೊಡಲು 1914ರಲ್ಲಿ ಬಹಿಷ್ಕೃತ ಹಿತಕಾರಿಣಿ ಸಭೆಯನ್ನು ಸ್ಥಾಪನೆ ಮಾಡಿದರು. ಈ ಸಭೆಯ ಸ್ಥಾಪನೆಯ ಉದ್ದೇಶವೆಂದರೆ ದಲಿತರಿಗೆ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳ ತತ್ವಗಳ ಮನವರಿಗೆ ಮಾಡಿಕೊಡುವುದಾಗಿತ್ತು ಮತ್ತು ತುಳಿತಕ್ಕೆ ಒಳಗಾಗಿದ್ದ ನಿಮ್ನ ವರ್ಗದವರನ್ನು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸವರ್ಣಿಯರಿಗೆ ಸಮಾನವಾಗಿ ನಿಲ್ಲುವಂತೆ ಮಾಡುವುದಾಗಿತ್ತು. ಅಲ್ಲದೆ ತಲೆ ತಲೆಮಾರುಗಳಿಂದ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಹಿಂದೂ ಸಮಾಜದ ಅಸ್ತಿತ್ವವನ್ನು ಉಳಿಸಿಕೊಂಡು ಹಿಂದೂ ಸಮಾಜದ ಒಂದು ವಿಷಜಂತುವಾಗಿ ಪರಿವರ್ತಿತವಾಗಿ ಜಾತಿ ವ್ಯವಸ್ಥೆಯ ನಿರ್ಮೂಲನೆ ಮಾಡಿ ಅಸ್ಪೃಶ್ಯರ ಕುಂದು ಕೊರತೆಗಳನ್ನು ನಿವಾರಿಸುವುದು ಇದರ ಪ್ರಮುಖ ಗುರಿಯಾಗಿತ್ತು. ಹೀಗೆ ಅಂಬೇಡ್ಕರರು ಬಹಿಷ್ಕೃತ

ಹಿತಕಾರಿಣಿ ಸಭೆಯ ಗುರಿ & ಉದ್ದೇಶಗಳು ಯಶಸ್ವಿಯಾಗಲು 1944ರಲ್ಲಿ ಪಿಪಲ್ಸ ಎಜ್ಯುಕೇಶನ ಸೊಸೈಟಿಯನ್ನು, 1946ರಲ್ಲಿ ಸಿದ್ಧಾರ್ಥ ಕಾಲೇಜನ್ನು ಬಾಂಬೆಯಲ್ಲಿ ಸ್ಥಾಪನೆ ಮಾಡಿದರು ಇದಕ್ಕೆ ಪೂರಕಗಾಗಿ ಗ್ರಂಥಾಲಯಗಳನ್ನು, ವಸತಿನಿಲಯಗಳನ್ನು(ಭೋಲಾಪುರ) ಸ್ಥಾಪನೆ ಮಾಡಿದರು., ಅಲ್ಲದೆ ಅಸ್ಪೃಶ್ಯರಿಗೆ ಅನ್ಯಾಯವಾದಾಗ ಅವರ ಪರವಾಗಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಮುಫತ್ತಾಗಿ ದಾಖಲಿಸುತ್ತಿದ್ದರು.

**ಮಹಡ್ ಸಮ್ಮೇಳನ**

ಸಾರ್ವಜನಿಕ ಸ್ಥಳಗಳಲ್ಲಿ ಯಾರಿಗೂ ಪ್ರವೇಶ ಮಾಡುವುದನ್ನು ಯಾರಿಗೂ ನಿರಾಕರಿಸುವಂತಿಲ್ಲಾ ಎಂಬ ಠರಾವನ್ನು ಬಾಂಬೆ ಶಾಸನಸಭೆಯು ಪಾಸ ಮಾಡಿತ್ತು. ಆದರೆ ಈ ಠರಾವು ಜಾರಿಗೆ ಬಂದಿರಲಿಲ್ಲ ಇದನ್ನರಿತ ಅಂಬೇಡ್ಕರರು ಮಹಡ ಸಮ್ಮೇಳನವನ್ನು ಮಾಡಲು ನಿರ್ಧರಿಸಿದರು. ಈ ಸಮ್ಮೇಳನದಲ್ಲಿ ಸುಮಾರು 10,000 ಜನರು ಭಾಗವಹಿಸಿದ್ದರು. ಇದರ ಅಧ್ಯಕ್ಷತೆಯನ್ನು ಡಾ.ಅಂಬೇಡ್ಕರರೆ ವಹಿಸಿಕೊಂಡಿದ್ದರು. ಈ ಸಮ್ಮೇಳನದ ಪ್ರಮುಖ ಉದ್ದೇಶವೆಂದರೆ ವೈದಿಕ ಸಮಾಜದಲ್ಲಿ ಬೇರೂರಿರುವ ಕೆಟ್ಟ ಸಂಪ್ರದಾಯಗಳನ್ನು ಮುರಿಯುವುದಾಗಿತ್ತು. ಹೀಗಾಗಿ ಅಂಬೇಡ್ಕರರು ಸಮ್ಮೇಳನಕ್ಕೆ ಬಂದ ಜನರ ಜೊತೆಗೂಡಿ ಮಹಡ ನಗರದಲ್ಲಿರುವ ಚೌಡರ ಕೆರೆಯ ನೀರನ್ನು ತಾವೇ ಸ್ವತಃ ಬೊಗಸೆಯಿಂದ ಕೂಡಿದು ಎಷ್ಟೋ ವರ್ಷಗಳಿಂದ ಆಚರಿಸಿಕೊಂಡು ಬಂದಿರುವ ನಿಯಮವನ್ನು ಮುರಿದರು. ಇದನ್ನು ತಿಳಿದ ಸಂಪ್ರದಾಯವಾದಿಗಳು ಅಂಬೇಡ್ಕರರ ಮೇಲೆ ಹಲ್ಲೆ ಮಾಡಿದರು ಮತ್ತು ಕೆಲ ಸಂಸ್ಕಾರಗಳ ಮೂಲಕ ಚೌಡರ ಕೆರೆಯನ್ನು ಶುದ್ಧಿಗೊಳಿಸಿದರು. ಇದನ್ನು ವಿರೋದಿಸುವ ದೃಷ್ಟಿಯಿಂದ ಇದಕ್ಕೆಲ್ಲಾ ಹಿಂದೂಗಳ ಸಂಹಿತೆಯಾದ ಮನುಸ್ಮೃತಿಯೇ ಕಾರಣವೆಂದು ಹೇಳಿ ಅದನ್ನು ಬಹಿರಂಗವಾಗಿ ಸುಟ್ಟು ಹಾಕಿದರು., ಅಲ್ಲದೆ ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಕೂಡಾ ತೆಗೆದುಕೊಂಡು ಹೋದರು ಅಲ್ಲಿಯೂ ಕೊನೆಗೆ ನ್ಯಾಯಾಲಯದ ತೀರ್ಪೂ ಅಂಬೇಡ್ಕರರ ಪರವಾಗಿತ್ತು(1935).

**ಕಾಲಾರಾಂ ದೇವಾಲಯದ ಪ್ರವೇಶ**

ಬಾಬಾ ಸಾಹೇಬರು ಕೇಳ ವರ್ಗದವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಲು ಮಾಡಿದ ಹೋರಾಟಗಳಲ್ಲಿ ದೇವಾಲಯಗಳ ಪ್ರವೇಶಾತಿಯೂ ಕೂಡಾ ಅತ್ಯಂತ ಪ್ರಮುಖವಾದದ್ದು. ಗಾಂಧಿಜಿಯವರು 1930ರಲ್ಲಿ ದಂಡಿ ಯಾತ್ರೆಯನ್ನು ಕೈಗೊಂಡಂತಹ ಸಂದರ್ಭದಲ್ಲಿ ಅಂಬೇಡ್ಕರರು ನಾಸಿಕನ ಕಾಲಾರಾಂ ದೇವಾಲಯದ ಪ್ರವೇಶವು ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಅಂಬೇಡ್ಕರರು ಹಲವಾರು ದೇವಾಲಯಗಳ ಪ್ರವೇಶವನ್ನು ಮಾಡಿದ ನಂತರ ಕೊನೆಗೆ ಕಾಲಾರಾಂ ದೇವಾಲಯ ಪ್ರವೇಶವನ್ನು ಮಾಡಿ ಹಿಂದೂ ಧರ್ಮಕ್ಕೆ ಅಂಟಿದ ಮೂಡನಂಬಿಕೆಯ ಬೂತವನ್ನು ಹೋಗಲಾಡಿಸಬೇಕೆಂದಿದ್ದರು. ಆದರೆ ಅಲ್ಲಿಯ ಸವರ್ಣಿಯರು ಕೆಲವು ತಿಂಗಳುಗಳ ಕಾಲ ದೇವಾಲಯದ ಬಾಗಿಲನ್ನು ತೆರೆಯಲೇ ಇಲ್ಲಾ. ಕೊನೆಗೆ ಅಂಬೇಡ್ಕರರು ಇದರಿಂದ ಯಾವುದೇ ಪ್ರಯೋಜನವು ಇಲ್ಲಾ ಮತ್ತು ಯಾವುದೇ ಬದಲಾವಣೆಗಳು ಆಗುವುದಿಲ್ಲಾ ಎಂದು ತಿಳಿದು ದೇವಾಲಯಗಳ ಪ್ರವೇಶಾತಿಯ ಹೋರಾಟವನ್ನು ಕೈಬಿಟ್ಟರು.

**ಪತ್ರಿಕೆಗಳ ಪ್ರಕಟನೆ**

ಬಾಬಾ ಸಾಹೇಬರು ದಲಿತರಿಗೆ ಸಾಮಾಜಿಕ ನ್ಯಾಯವನ್ನು ಕೊಡಿಸಲು ಹಲವಾರು ಪತ್ರಿಕೆಗಳನ್ನು ಜಾರಿಗೆ ತಂದರು ಈ ಪತ್ರಿಕಗಳ ಮೂಲಕ ಹಿಂದೂ ಸಮಾದಲ್ಲಿದ್ದ ಗೊಡ್ಡು ಸಂಪ್ರದಾಯಗಳನ್ನು ನಿರ್ಮೂಲನೆ ಮಾಡಲು ಹಗಲಿರುಳು ಶ್ರಮಿಸಿದರು., ಅದರಲ್ಲಿ ಪ್ರಮುಖವಾಗಿ ಹೇಳಬೇಕೆಂದರೆ

1. ಬಹಿಷ್ಕೃತ ಭಾರತ : ಬಹಿಷ್ಕೃತ ಭಾರತ ಎಂಬ ಪಾಕ್ಷಿಕ ಮರಾಠಿ ಪತ್ರಿಕೆಯನ್ನು ಏಪ್ರಿಲ್ 3, 1927ರಲ್ಲಿ ಹೊರತಂದರು ಈ ಪತ್ರಿಕೆಯ ಮೂಲಕ ದಲಿತರ ಮೇಲೆ ಆಗುತ್ತಿರುವ ಅನ್ಯಾಯಗಳು ಏನು? ಅವುಗಳನ್ನು ಹೇಗೆ ಸರಿಪಡಿಸಬೇಕು, ಅವರಿಗೆ ಸಿಗಬೇಕಾದ ಹಕ್ಕುಗಳೇನು, ಅವರ ಅಭಿವೃದ್ಧಿಗೆ ಹೇಗೆ ಶ್ರಮಿಸಬೇಕು ಮತ್ತು ಬ್ರಿಟಿಷರು ದಲಿತರಿಗೆ ಯಾವ ರೀತಿಯ ಸೌಲತ್ತುಗಳನ್ನು ಕೊಡಬೇಕು ಎಂಬಿತ್ಯಾದಿ ಹಲವಾರು ಅಂಶಗಳನ್ನು ಈ ಪತ್ರಿಕೆಯ ಮೂಲಕ ಅಂದಿನ ಸಮಾಜದ ಮುಂದೆ ಇಟ್ಟರು ಎಂದು ಹೇಳಬಹುದು.
2. ಮೂಕನಾಯಕ : ಅಂಬೇಡ್ಕರರು ಅಂದಿನ ಸಮಾಜದಲ್ಲಿ ಬಾಯಿದ್ದು ಮೂಕರಾಗಿದ್ದ ಅಸ್ಪೃಶ್ಯರಿಗೆ ಮಾತು ಕಲಿಸಲು ಮೂಕನಾಯಕ ಎಂಬ ಪಾಕ್ಷಿಕ ಪತ್ರಿಕೆಯನ್ನು 31ನೇಯ ಜನೇವರಿ 1920ರಲ್ಲಿ ಮರಾಠಿ ಭಾಷೆಯಲ್ಲಿ ಹೊರತಂದರು., ಇದರ ಪ್ರಥಮ ಸಂಪಾದಕರು ನಂದಾರಾಮ ಬತ್ಕಾರ ಅವರಾಗಿದ್ದರು., ಅಂಬೇಡ್ಕರರು ಇದಕ್ಕೆ ಬರೆದ ಮೊದಲ ಲೇಖನದಲ್ಲಿ 'ದಲಿತ' ವರ್ಗದವರ ಕಡುವೈರಿಗಳೆಂದರೆ ಬಡತನ, ದೌರ್ಬಲ್ಯ ಮತ್ತು ಅಜ್ಞಾನ ಎಂದು ಅಸ್ಪಶ್ಯರ ಸಮಾಜಕ್ಕೆ ಮನವರಿಗೆ ಮಾಡಿಕೊಟ್ಟರು ಅಲ್ಲದೆ ಈ ಪತ್ರಿಕೆಯ ಮೂಲಕ ದಲಿತರನ್ನು ಸಶಕ್ತರನ್ನಾಗಿ ಮಾಡಿ ಸಮಾಜದಲ್ಲಿ ಉತ್ತಮವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯ ಮಾಡುವ ಪ್ರಮುಖ ಉದ್ದೇಶವಾಗಿತ್ತು.

ಇಷ್ಟೆ ಅಲ್ಲದೆ ಇನ್ನೂ ಹಲವಾರು ಪತ್ರಿಕೆಗಳನ್ನು ಜಾರಿಗೆ ತಂದರು ಅದರಲ್ಲಿ ಈಕ್ವಾಲಿಟಿ ಎಂಬ ಪತ್ರಿಕೆಯ ಮೂಲಕ ಬ್ರಿಟಿಷರಿಗೆ ಹಿಂದೂ ಧರ್ಮದಲ್ಲಿರುವ ಅನಾಚಾರಗಳನ್ನು, ಮೂಡನಂಬಿಕೆಗಳನ್ನು ಬ್ರಿಟಿಷರಿಗೆ ಮನವರಿಕೆ ಮಾಡಿಕೊಡುವ ಉದ್ದೇಶ ಹೊಂದಿತ್ತು., ಇದಲ್ಲದೆ ಪ್ರಬುದ್ಧ ಭಾರತ ಎನ್ನುವ ಮರಾಠಾ ಭಾಷೆಯ ವಾರ ಪತ್ರಿಕೆಯನ್ನು ತಮ್ಮ ಇಳಿ ವಯಸ್ಸಿನಲ್ಲಿ ಪ್ರಾರಂಭಿಸಿದರು ಇದರಲ್ಲಿ ಪ್ರಮುಖವಾಗಿ ಗೌತಮ ಬುದ್ಧನ ಮಾನವಿಯ ವಿಚಾರಗಳನ್ನು ಎಲ್ಲಾ ಸಮಾಜಕ್ಕೂ ಮನವರಿಗೆ ಮಾಡಿಕೊಟ್ಟರು.

**ವತನ ವ್ಯವಸ್ಥೆಯ ರದ್ದತಿ**

ಈ ವತನ ವ್ಯವಸ್ಥೆಯ ಪ್ರಕಾರ ಮಹರಗಳು ಅಂದರೆ ಅಸ್ಪೃಶ್ಯರು ಹಗಲು ರಾತ್ರಿ ಎನ್ನದೆ ವರ್ಷವಿಡಿ ಗೊತ್ತುಮಾಡಿದ ಸರಕಾರದ ಸೇವೆಯನ್ನು ಚಾಚು ತಪ್ಪದೆ ಮಾಡಬೇಕಿತ್ತು. ಈ ಕಾರ್ಯಕ್ಕೆ ನಿಗದಿಪಡಿಸಿದ ವ್ಯಕ್ತಿಯು ಬೇರೆ ಯಾವ ಕೆಲಸಕ್ಕೆ ಹೋದರು, ತನ್ನ ಕುಟುಂಬದ ಸದಸ್ಯನಿಗೆ ಆ ಕೆಲಸವನ್ನು ವಹಿಸಿಕೊಟ್ಟು ಹೋಗಬೇಕಾಗಿತ್ತು. ಈ ಕೆಲಸವನ್ನು ಮಾಡುತ್ತಿದ್ದ ಮಹರಗೆ ಸರಕಾರದವರು ತುಂಡು ಭೂಮಿ, ಸ್ವಲ್ಪ ಪ್ರಮಾಣದ ಕೂಲಿ ಮತ್ತು ದವಸವನ್ನು ಮಾತ್ರ ಕೊಡುತ್ತಿದ್ದರು., ಇದನ್ನು ಗಮನಿಸಿದ ಅಂಬೇಡ್ಕರರು ಈ ವ್ಯವಸ್ಥೆಯಿಂದ ಆತ್ಮಗೌರವಕ್ಕೆ ದಕ್ಕೆ ಬರುತ್ತದೆ ಎಂದು ವಿರೋದ ವ್ಯಕ್ತಪಡಿಸಿದರು ಅಲ್ಲದೆ ತಾವು 1927ರಲ್ಲಿ ಶಾಸನ ಸಭೆಗೆ ನಾಮಕರಣಗೊಂಡಾಗ ಅದನ್ನು ರದ್ದುಪಡಿಸಬೇಕೆಂದು ಸರಕಾರಕ್ಕೆ ಆಗ್ರಹಿಸಿದರು ಆದರೆ ಅದು ಸಾಧ್ಯವಾಗಲಿಲ್ಲ., ಮುಂದೆ 1937ರ ಬಾಂಬೆ ಪ್ರಾಂತ್ಯದ ಚುನಾವಣೆಯನ್ನು ಗೆದ್ದು, ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತು ಈ ವತನ ಪದ್ಧತಿಯನ್ನು ರದ್ದುಗೊಳಿಸುವಲ್ಲಿ ಅಂಬೇಡ್ಕರರು ಯಶಸ್ವಿಯಾಗಿ ಮಹರರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಲು ಸಪಲರಾದರು ಎಂದು ಹೇಳಬಹುದು.

**ಹರಿಜನ(ದೇವರ ಮಕ್ಕಳು)**

ಅಸ್ಪಶ್ಯರಿಗೆ ಸಾಮಾಜಿಕವಾಗಿ ಎಷ್ಟೊ ಅವಮಾನಗಳು ಆಗುತ್ತಿದ್ದವು ಅದರಲ್ಲಿ ಹೆಸರಿನ ಮೇಲೆಯೂ ಆಗಹತಿತ್ತು., ಅದು ವಿಧಾನಸಭೆಯಲ್ಲಿ ನಡೆದಂತಹ ಸಂಧರ್ಭ ಅಂದರೆ ಬಾಂಬೆ ವಿಧಾನಸಭೆಯಲ್ಲಿ ರೈತರಿಗೆ ಸಂಬಂಧಪಟ್ಟ ಮಸೂದೆಯನ್ನು ಮಂಡಿಸಲಾಗಿತ್ತು ಆ ಮಸೂದೆಯಲ್ಲಿ ಅಸ್ಪೃಶ್ಯರನ್ನು 'ಹರಿಜನ' ಎಂಬ ಹೆಸರಿನಿಂದ ಸೂಚಿಸಲಾಗಿತ್ತು, ಹೀಗೆ ಸೂಚಿಸಲಾದ 'ಹರಿಜನ' ಎಂಬ ಪದವು ಡಾ. ಬಾಬಾ ಸಾಹೇಬರ ಗಮನಕ್ಕೆ ಬಂದಿತು ಆಗ ಅಂಬೇಡ್ಕರರು ಕೋಪಗೊಂಡು ವಿಧಾನಸಭೆಯಲ್ಲಿಯೇ ಅಸ್ಪೃಶ್ಯರನ್ನು ದೇವರ ಮಕ್ಕಳೆಂದು ಕರೆದರೆ ಇತರೆಯವರನ್ನು/ಬೇರೆಯವರನ್ನು ರಾಕ್ಷಸರ ಮಕ್ಕಳೆಂದು ಕರೆಯಬೇಕೆ ಎಂದು ಪ್ರಶ್ನೆ ಹಾಕಿದರು, ಆದರೆ ಆ ಸಮಯದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೇಸ ಬಹುಮತವನ್ನು ಹೊಂದಿದ್ದರಿಂದ 'ಹರಿಜನ' ಎಂಬ ಪದವನ್ನು ತೆಗೆಯದಂತೆ ನೋಡಿಕೊಂಡಿತು., ಆಗ ಬಾಬಾ ಸಾಹೇಬರು ಅಸ್ಪೃಶ್ಯರನ್ನು ಹರಿಜನ ಎಂದು ಕರೆಯುವುದರಿಂದ ಅವರ ಜೀವನದಲ್ಲಿ ಯಾವುದೇ ತರಹದ ಬದಲಾವಣೆಗಳು ಆಗುವುದಿಲ್ಲ ಅವರ ಜೀವನ ಸುಧಾರಣೆಯಾಗುವುದಿಲ್ಲ ಎಂದು ಹೇಳಿ ಸಭಾತ್ಯಾಗ ಮಾಡಿದರು.

ಹೀಗೆ ಅಂಬೇಡ್ಕರರು ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಲು ಮೇಲಿನವುಗಳಷ್ಟೆ ಅಲ್ಲದೇ ಇನ್ನೂ ಹಲವಾರು ರೀತಿಯ ಹೋರಾಟಗಳನ್ನು, ಚಳುವಳಿಗಳನ್ನು ಮಾಡಿರುವುದನ್ನು ನಾವು ಸ್ಮರಿಸಬಹುದು.

**ಉಪಸಂಹಾರ**

ಒಟ್ಟಿನಲ್ಲಿ ಹೇಳುವುದಾದರೆ ಸಾಮಾಜಿಕ ಸುಧಾರಣೆಗಾಗಿ, ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಲು ಹಲವಾರು ಮಹಾಪುರುಷರು ಆಗಿಹೋಗಿದ್ದಾರೆ ಆದರೆ ಅಸ್ಪೃಶ್ಯರಿಗೆ ಹೋರಾಟ ಮಾಡಿದಂಹ ಮಹಾಪುರುಷರಲ್ಲಿ ಮುಂಚೂಣಿಯಲ್ಲಿ ನಿಲ್ಲುವಂತಹ ವ್ಯಕ್ತಿ ಎಂದರೆ ಅದು ಡಾ. ಬಾಬಾ ಸಾಹೇಬ ಅಂಬೇಡ್ಕರರು ಎಂದು ಹೇಳಬಹುದು. ಅಸ್ಪೃಶ್ಯರು ಸಹ ಮನುಷ್ಯರು ಸಹಿತ ಮನುಷ್ಯರೇ, ಅವರು ಸಹಿತ ಎಲ್ಲರೊಂದಿಗೆ ಬೇರೆಯಬೇಕು, ಅವರಿಗೂ ಸಾಮಾಜಿಕ ನ್ಯಾಯ ಸಿಗಬೇಕು, ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತಿದ್ದ ಸಮಾಜದಲ್ಲಿ ಎಲ್ಲಾ ಹಕ್ಕುಗಳ ಒಡೆಯರಾಗಬೇಕು ಎಂದು ತಮ್ಮ ಜೀವ ಇರುವವರೆಗೂ ಹೋರಾಡಿ ಅಸ್ಪೃಶ್ಯರ ಮನಸ್ಸಿನಲ್ಲಿ ಸದಾ ಉಳಿದಿರುವ ಧಿಮಂತ ವ್ಯಕ್ತಿ ಅಂಬೇಡ್ಕರ ಆಗಿದ್ದಾರೆ, ತಾವು ಹುಟ್ಟಿದ್ದು ಬಡ ಕುಟುಂಬದಲ್ಲಿ ಯಾವುದೇ ತರಹದ ರಾಜಕೀಯವಾಗಿ,

ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತ ಧಾರ್ಮಿಕವಾಗಿ ಯಾವುದೇ ತರಹದ ಬೆಂಬಲ, ಅಧಿಕಾರವಿರದೇ ಇದ್ದರೂ ತಮ್ಮ ಸ್ವಸಾಮರ್ಥ್ಯ, ಬುದ್ಧಿಶಕ್ತಿ, ವಿಚಾರಶಕ್ತಿ, ಮಾನವಿಯತೆಯಿಂದ ಮುಗಿಲೆತ್ತರಕ್ಕೆ ಬೆಳೆದು ತನ್ನ ಜನಾಂಗವು ಮುಗಿಲೆತ್ತರಕ್ಕೆ ಬೆಳೆಯಲಿ ಎಂಬ ಆಶಯವನ್ನು ಹೊಂದಿದ ಅವತಾರ ಪುರುಷ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲಾ.

**ಗ್ರಂಥಸೂಚಿ**


1. ಅಂಬೇಡ್ಕರ.ಬಿ.ಆರ್ : 'ಬರಹಗಳು ಮತ್ತು ಭಾಷಣಗಳು', ಸಂಪುಟ1–15, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ ಬೆಂಗಳೂರು.
2. ಅಂಬೇಡ್ಕರ.ಬಿ.ಆರ್ : 'ಪೂನಾ ಒಡಂಬಡಿಕೆ', ಆದಿಜನರ ಅರಿವಿನ ಜಾತಾ ಸಮಿತಿ, ಬೆಂಗಳೂರು, 1995.
3. ಅಂಬೇಡ್ಕರ.ಬಿ.ಆರ್ : 'ನಾನೇಕೆ ಮಂತ್ರಿ ಬಿಡಬೇಕಾಯಿತು', ದಲಿತ ಸಾಹಿತ್ಯ ಅಕಾಡೆಮಿ ಬೆಂಗಳೂರು, 1996.
4. ಇರ್ಫಾನ ಹಬೀಬ : 'ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ', ಕಕ್ಕಿಲ್ಲಾಯ(ಅನು), ನವಕರ್ನಾಟಕ ಪ್ರಕಾಶನ, ಬೆಂಗಳೂರು, 1990.
5. ಚಾಂಡಾಳ : 'ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ', ಚೈತ್ರ ಪ್ರಕಾಶನ, ಚಿಕ್ಕ ತಿರುಪತಿ, 1992.
6. ಪೂಜಾರಿ ದತ್ತಾತ್ರೇಯ ಮತ್ತು ಗೀತಾ ಪೂಜಾರಿ : 'ಡಾ. ಅಂಬೇಡ್ಕರ ಅವರ ಬಹಿಷ್ಕೃತ ಭಾರತದಲ್ಲಿನ ಸ್ಫುಟಲೇಖನಗಳು' ಭಾಗ – 1, ಸಾಗರದೀಪ ಪ್ರಕಾಶನ, ಕಾರವಾರ, 1986.
7. ಮಾಲಗಿತ್ತಿ ಅರವಿಂದ : 'ಡಾ. ಅಂಬೇಡ್ಕರ ವಿಚಾರದಾರೆ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರ, 1991.
8. ಶಿವಪ್ರಕಾಶ ಎಚ್.ಎಸ್. ಮತ್ತು ಇತರರು : 'ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ', ಕರ್ನಾಟಕ ಸಾಹಿತ್ಯ ಅಕ್ಯಾಡೆಮಿ, ಬೆಂಗಳೂರು, 1993.
9. ಹಣಮಂತಯ್ಯ ಎಲ್ : 'ಅಂಬೇಡ್ಕರ ಮತ್ತು ಸಮಕಾಲಿನತೆ', ವಾಹಿನಿ ಪ್ರಕಾಶನ, ಬೆಂಗಳೂರು, 1993.